ಅ) ಇಲ್ಲ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ಶ್ರೀ ಎಸ್. ಪ್ರಭಾಕರ್ ರಾಣೆ : ಒಂದು ಮನವಿಯನ್ನು ನಾವು ಕೊಟ್ಟಿದ್ದೇವೆ. ಕಳೆದ ಸೋಮವಾರ ಮಾನ್ಯ ಗೃಹಸಚಿವರು ಈ ಸಭೆಯಲ್ಲಿ ಹಿರಿಯ ಸದಸ್ಯರಾದ ಶ್ರೀ ಕೆ.ಹೆಚ್. ರಂಗನಾಥ್‌ರವರು ಎತ್ತಿದ ಪ್ರಸ್ತಾವಕ್ಕೆ ಉತ್ತರಿಸಿದ್ದಾರೆ ಆದ್ದರಿಂದ ಸಂಶಯಗಳು ಇನ್ನೂವರೆಗೆ ನಮ್ಮಲ್ಲಿ ಉಳಿದಿವೆ. ಆದ್ದರಿಂದ ಆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಏಕಾಂತಯ್ಯ : ನಾನು ಒಂದು ಪ್ರಸ್ತಾವನೆಯನ್ನು ನಿಮಯ 191ರ ಪ್ರಕಾರ ತಮಗೆ ಕಳಿಸಿದ್ದೇನೆ. ಅದರ ಬಗ್ಗೆ ತಾವು ತೀರ್ಮಾನ ಮಾಡಿ ಸಾಧ್ಯವಾದಷ್ಟು ಬೇಗ ಸಭೆಯ ಮುಂದಿಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಸಂಶಯ ಅಷ್ಟೇ ಅಲ್ಲ, ಸರ್ಕಾರ ತನ್ನ ಪೂರ್ಣ ಗಮನವನ್ನು ಹರಿಸಬೇಕಾಗುತ್ತದೆ. ಏಕೆಂದರೆ ಇದ್ದದ್ದು ಇನ್ನು ಮುಂದೆ ಆಗಬೇಕಾಗಿರುವ ಬಗ್ಗೆ ಏನು ತೊಂದರೆ ಇದೆ ಎಂದು ಸರ್ಕಾರ ಗಮನಹರಿಸಿ ನೋಡಿ ತಿದ್ದುಪಡಿ ತರುವುದಾದರೆ ತತಕ್ಷಣ ತರಬೇಕಾದ ಪರಿಸ್ಥಿತಿ ಬಂದಿದೆ. ಆದ್ದರಿಂದ ಅದನ್ನು ವಿಶದವಾಗಿ ಹೇಳಲು ಸಮಯ ಬೇಕಾಗುತ್ತದೆ. ತಾವು ಯಾವುದಾದರೂ ದಿನ ನಿಗದಿಮಾಡಿದರೆ ಸರ್ಕಾರದ ಗಮನಕ್ಕೆ ನಾವು ತಿಳಿಸಲು ಸಾಧ್ಯವಾಗುತ್ತದೆ.

ಅಧ್ಯಕ್ಷರು : ಇಂದು ನನಗೆ ಎರಡು ಸೂಚನೆ ಬಂದಿವೆ. ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಕೆ.ಹೆಚ್. ಪಾಟೀಲರು ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಪತ್ರ ಬರೆಯುವುದು ಈಗಾಗಲೇ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಸಾಕಷ್ಟು ಅವಕಾಶ ಕೊಟ್ಟರೆ.. ನಾನು ಹೇಳ್ತಾ ಇರೋದು ಅದು ಅತ್ಯಂತ ಪ್ರಮುಖ ವಿಷಯ, ಸಚಿವ ಸಂಪುಟದ ಒಬ್ಬ ಸದಸ್ಯರೇ ಮಂತ್ರಿಮಂಡಲದಲ್ಲಿ ತೀರ್ಮಾನವಾಗದೇ ಈ ರೀತಿ ತೀರ್ಮಾನ ತೆಗೆದುಕೊಂಡಿರುವುದು ಸರಿಯಲ್ಲ ಎಂದು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ ಇಡೀ ರಾಜ್ಯದ ಜನತೆಗೆ ಸಂಬಂಧಿಸಿದ ಪ್ರಶ್ನೆ ಇದು.

ಅಧ್ಯಕ್ಷರು : ಇವೆಲ್ಲವನ್ನೂ ಪರಿಶೀಲಿಸಿ ನಾಳೆ ಹೇಳ್ತೇನೆ. ಈಗ ಸಭೆ ಮುಂದುವರಿದು ನಾಳೆ 11 ಗಂಟೆಗೆ ಸೇರುವುದು.

(ಸದನವು 8 ಗಂಟೆ 6 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಾರನೆಯದಿನ ಬೆಳಿಗ್ಗೆ 11-00 ಗಂಟೆಗೆ ಸೇರಲು ತೀರ್ಮಾನಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)